**O.S. No.482/2012**

**ಸಿ.ಡಬ್ಲ್ಯೂ-1**

ದಿನಾಂಕಃ 20.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ ಎಸ್ ಎಸ್ ಐ ವಕೀಲರಿಂದಃ

ನಾನು ಪ್ರಕರಣದಲ್ಲಿ ಹಾಜರುಪಡಿಸಿರುವ ಮತ್ತು ನಿಸಿ 1 ರಿಂದ 6 ದಾಖಲೆಗಳ ಮೂಲ ಪ್ರತಿ ನಮ್ಮ ಕಛೇರಿಯಲ್ಲಿ ಇರುವುದಿಲ್ಲ ಎಂದರೆ ಸರಿ. ಈ ಕುರಿತು ಯಾವುದೇ ದಾಖಲೆಗಳು ನಮ್ಮ ಕಛೇರಿಯಲ್ಲಿ ಇರುವುದಿಲ್ಲ ಎಂದರೆ ಸರಿ. ನಿಸಿ 1 ರಿಂದ 6 ದಾಖಲೆಗಳನ್ನು ನನ್ನ ಹಿಂದಿನ ಅಧಿಕಾರಿಗಳು ದೃಢೀಕರಣ ಮಾಡಿರುತ್ತಾರೆ ಎಂದರೆ ಸರಿ. ಹಿಂದಿನ ಅಧಿಕಾರಿಗಳು ದೃಢೀಕರಣ ಮಾಡಿದ್ದು ಅದರ ಆಧಾರದ ಮೇಲೆ ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನ್ಯಾಯಾಲಯದಿಂದ ನಮ್ಮ ಕಛೇರಿಗೆ ದಾಖಲೆಗಳ ಕುರಿತು ಸಮನ್ಸ ಬಂದ ನಂತರ ಹುಡುಕಾಟ ಮಾಡಿದ್ದು, ದಾಖಲೆಗಳು ದೊರೆತಿರುವುದಿಲ್ಲ ಎಂದರೆ ಸರಿ. ನಮ್ಮ ಇಲಾಖೆಯಲ್ಲಿ ನಿಸಿ 1 ರಲ್ಲಿನ ದಾಖಲೆಯ ಹಿಂದಿನ ದಾಖಲೆಗಳು ಮತ್ತು ಸದರಿ ದಾಖಲೆಯ ಪೂರ್ಕ ದಾಖಲೆಗಳು ಲಭ್ಯ ಇರುವುದಿಲ್ಲವೆಂದರೆ ಸರಿ.

ನಿಸಿ 4 ದಾಖಲೆ ಯಾವ ವರ್ಷದಲ್ಲಿ ಮತ್ತು ಯಾವ ಯೋಜನೆಯಡಿಯಲ್ಲಿ ಮಂಜೂರು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ, ಕಾರಣ ನಮ್ಮ ಇಲಾಖೆಯಲ್ಲಿ ಈ ಕುರಿತು ಮಾಹಿತಿ ಇರುವುದಿಲ್ಲ. ಅದೇ ರೀತಿ ನಿಸಿ 4 ರಲ್ಲಿ ವರ್ಷಗಳನ್ನು ತಿದ್ದಿದ ಹಾಗೆ ಕಂಡುಬರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಯಾವ ಫಲಾನುಭವಿಗೆ ಯಾವ ವರ್ಷದಲ್ಲಿ ಮಂಜೂರು ಆಗಿರುತ್ತದೆ ನಿಖರ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನಿಸಿ 4 ರಲ್ಲಿ 92 ಎಂದು ಬರೆದು ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ, ಅದು ತಿದ್ದುಪಡಿಯಲ್ಲ ಎನ್ನುತ್ತಾರೆ. ನಿಸಿ 4 ದಾಖಲೆಯನ್ನು ಯಾರು ಯಾವ ವರ್ಷದಲ್ಲಿ ಬರೆದಿರುತ್ತಾರೆ ಗೊತ್ತಿಲ್ಲ. ಅದೇ ರೀತಿ ನಿಸಿ 4 ರಲ್ಲಿ ಅಬ್ದುಲ

ರಜಾಕ ಎಂದು ನಮೂದು ಆಗಿದ್ದು, ಆದರೆ ನಿಸಿ 5 ರಲ್ಲಿ ಅಸನಸಾಬ ಎಂದು ನಮೂದು ಆಗಿರುತ್ತದೆ ಎಂದರೆ ಸರಿ. ಈ ಎರಡೂ ದಾಖಲೆಗಳ ಮೇಲಿನ ವ್ಯಕ್ತಿಯ ಮಾಹಿತಿ ನನಗೆ ಇರುವುದಿಲ್ಲ. ನಿಸಿ 5 ಮೂಲ ದಾಖಲೆ ನಮ್ಮ ಕಛೇರಿಯಲ್ಲಿ ಇರುವುದಿಲ್ಲ ಎಂದರೆ ಸರಿ. ನಿಸಿ 6 ದಾಖಲೆಯು ಅದರಲ್ಲಿನ ಆಸ್ತಿಗೆ ವಿದ್ಯುತ್ ಸರಬರಾಜು ಮಾಡಿದ ಬಗ್ಗೆ ಇರುತ್ತದೆ. ನಿಸಿ 6 ರಲ್ಲಿ ಆಸ್ತಿ ನಂಬರ ನಮೂದು ಇರುವುದಿಲ್ಲ ಎಂದರೆ ಸರಿ. ಆದರೆ ವ್ಯಕ್ತಿಯ ಹೆಸರು ಇರುತ್ತದೆ. ಅದರಲಿನ ವ್ಯಕ್ತಿಯ ಕುರಿತು ಮಾಹಿತಿ ಇರುವುದಿಲ್ಲ. ಪ್ರತಿವಾದಿ ಪರ ವಕೀಲರು ನಿಸಿ 1 ರಿಂದ 6 ದಾಖಲೆಗಳ ಕುರಿತು ಮಾಹಿತಿ ನೀಡುವಂತೆ ನೋಟಿಸು ನೀಡಿದ್ದರು ಎಂದರೆ ಸರಿ. ನೋಟಿಸ್ಸು ನೀಡಿದ ಪ್ರತಿ ಮತ್ತು ಅಂಚೆ ರಸೀದಿ ಮತ್ತು ಅಂಚೆ ಸ್ವೀಕೃತಿಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ **ನಿಡಿ5, 6 ಮತ್ತು 7 ಎಂದು** ಗುರುತಿಸಲಾಯಿತು. ಈ ನೋಟಿಸ್ಸಿಗೆ ನಮ್ಮ ಕಛೇರಿಯಿಂದ ಲಭ್ಯ ಇರುವ ದಾಖಲೆಗಳನ್ನು ಮಾತ್ರ ಪೂರೈಸಿರುತ್ತೇವೆ. ದಾಖಲೆಗಳ ಪೂರೈಸಿದ ಬಗ್ಗೆ ನಮ್ಮ ಕಛೇರಿಯಲ್ಲಿ ದಾಖಲೆ ಇರುವುದಿಲ್ಲ. ನಮ್ಮ ಕಛೇರಿಯಲ್ಲಿ ಯಾವಾಗಲೂ ಹೊರವಾಹಕ ಮತ್ತು ಒಳವಾಹಕ ಎಂದು ಪುಸ್ತಕ ನಿರ್ವಹಿಸಿರುತ್ತೇವೆ ಎಂದರೆ ಸರಿ. ಈ ನೋಟಿಸಿಗೆ ನೀಡಿದ ದಾಖಲೆಗಳ ಹೊರವಾಹಕ ಕುರಿತು ನಾನು ಪರಿಶೀಲನೆ ಮಾಡಿರುವುದಿಲ್ಲ.

ಸರ್ಕಾರದಿಂದ ಯಾವ ವರ್ಷದಲ್ಲಿ, ಯಾವ ಫಲಾನುಭವಿಗಳಿಗೆ ಮನೆ ಮಂಜೂರು ಆಗಿರುತ್ತದೆ ಎಂದು ನಮ್ಮ ಕಛೇರಿಯಲ್ಲಿ ಮಾಹಿತಿ ಇರುತದೆ. ಅದೇ ರೀತಿ ಅವುಗಳ ಕುರಿತು ಪುಸ್ತಕಗಳಲ್ಲಿ ನಿಖರ ನಮೂದನೆ ದಾಖಲೆಗಳು ಇರುತ್ತವೆ. ಯಾವುದೇ ದಾಖಲೆಗಳನ್ನು ಕೆಳ ಕಛೇರಿಯಿಂದ ಮೇಲ್ದರ್ಜೆಗೆ ಕಛೇರಿಗೆ ವರ್ಗಾಯಿಸಿದಾಗ ಆ ದಾಖಲೆಗಳು ಮೇಲಿನ ಕಛೇರಿಗೆ ಬರುತ್ತವೆ ಎಂದರೆ ಸರಿ. ಹೊಸದಾಗಿ ಅಧಿಕಾರ ಸ್ವೀಕರಿಸುವ ಅಧಿಕಾರಿಗಳು ಪೂರ್ವ ಅಧಿಕಾರಿಯಿಂದ

ಸಂಪೂರ್ಣ ಪ್ರಭಾರ ವಹಿಸುತ್ತಾರೆ ಎಂದರೆ ಸರಿ. ಅದೇ ದಾಖಲೆಗಳು ಮುಂದುವರೆದುಕೊಂಡು ಹೋಗುತ್ತವೆ.

1991 ರಲ್ಲಿ ಮೊದಲ ಬಾರಿಗೆ ಆಶ್ರಯ ಯೋಜನೆ ಜಾರಿಗೆ ಬಂದಿರುತ್ತದೆ ಎಂದರೆ ಸರಿ. 1985 ರಲ್ಲಿ ಇಂಧ್ರಿರಾ ಅವಾಸ ಯೋಜನೆ ಜಾರಿಯಲ್ಲಿ ಇತ್ತು ಎಂದರೆ ಸರಿ. 2001 ರಲ್ಲಿ ಬಸವ ವಸತಿ ಯೋಜನೆ ಜಾರಿಗೆ ಬಂದಿರುತ್ತದೆ. ಈ ಯೋಜನೆಗಳ ಅಡಿಯಲ್ಲಿ ವಸತಿ ರಹಿತ ಸಾರ್ವಜನಿಕರಿಗೆ ಮನೆ ಕಟ್ಟಿಸಿಕೊಡಲಾಗುತ್ತದೆ ಎಂದರೆ ಸರಿ. ಈಗ ಮನೆ ಕಟ್ಟಿಸುವ ಬದಲು ಸಹಾಯ ಧನ ನೀಡುತ್ತಾರೆ. ಹಕ್ಕು ಪತ್ರ ವಿತರಣೆಯನ್ನು ಮೊದಲು ಯಾವ ರೀತಿ ಮಾಡುತ್ತಿದ್ದರು ನನಗೆ ಗೊತ್ತಿಲ್ಲ, ಈಗ ನಾವು ಫಲಾನುಭವಿ ಹೆಸರು, ವರ್ಷ ಮತ್ತು ಕಾರ್ಪೋರೇಷನ ಹೆಸರು ಮುಂತಾದವುಗಳನ್ನು ಖಚಿತ ಪಡಿಸಿಕೊಂಡು ಹಕ್ಕು ಪತ್ರ ವಿತರಣೆ ಮಾಡುತ್ತೇವೆ. ಮೊದಲು ಹಕ್ಕು ಪತ್ರ ವಿತರಣೆ ಮಾಡುವಾಗ ಉಪನೋಂದಣಿ ಕಛೇರಿಯಲ್ಲಿ ನೋಂದಣಿ ಮಾಡಲಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ, ಇರಬಹುದು.

ಫಲಾನುಭವಿಗಳಿಗೆ ಮನೆಗಳನ್ನು ವಿತರಿಸುವಾಗ ಗ್ರಾಮ ಸಭೆಯಲ್ಲಿ ಠರಾವು ಪಾಸು ಮಾಡುತ್ತಿದ್ದರು ಎಂದರೆ ಸರಿಯಲ್ಲ. ತಾಲೂಕ ಪಂಚಾಯತಿಯವರು ಮಾಡುತ್ತಾರೆ ಎನ್ನುತ್ತಾರೆ. ಈ ಕುರಿತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ದಾಖಲೆಗಳ ಕುರಿತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ನನ್ನ ಹಿಂದಿನ ಅಧಿಕಾರಿಗಳು ದೃಢೀಕರಣ ಮಾಡಿದ್ದು, ನ್ಯಾಯಾಲಯದಿಂದ ನೋಟಿಸ್ಸು ಬಂದಿದ್ದರಿಂದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ ಎಸ್ ಎಸ್ ವಕೀಲರಿಂದಃ**

ನಿಸಿ 1 ರಿಂದ 6 ದಾಖಲೆಗಳನ್ನು ಪೂರೈಸಿದಾಗ ನಾನು ಮುಖ್ಯ ಅಧಿಕಾರಿ ಆಗಿ ಕರ್ತವ್ಯದಲ್ಲಿ ಇರಲಿಲ್ಲ. ದಾವಾ ಆಸ್ತಿ ಸರ್ವೇ ನಂಃ111 ರಲ್ಲಿ ಬರುತ್ತದೆ ಎಂದರೆ ಗೊತ್ತಿಲ್ಲ ಆದರೆ ಹಕ್ಕು ಪತ್ರ ಕೊಟ್ಟ ಬಗ್ಗೆ ಇರುತ್ತದೆ. ವಾರ್ಡ ನಂಃ17 ರಲ್ಲಿ ಗುಂಪು ಮನೆಗಳು ಇರುತ್ತವೆ ಎಂದರೆ ಸರಿ. ಆ ವಾರ್ಡನಲ್ಲಿ ಇರು ಎಲ್ಲ ಮನೆಗಳು ಸರ್ಕಾರದಿಂದ ಮಂಜೂರು ಆದ ಮನೆಗಳು ಎಂದರೆ ಸರಿ. ಇಂತಹ ಮನೆಗಳನ್ನು ಒಂದು ನಿರ್ಧಿಷ್ಟ ಅವಧಿಯವರೆಗೆ ಮಾರಾಟ ಮಾಡಬಾರದು ಎಂದು ಷರತ್ತು ವಿಧಿಸಿರುತ್ತಾರೆ ಎಂದರೆ ಸರಿ. ಇಂತಹ ಷರತ್ತುಗಳ ಕುರಿತು ನಾನು ಈಗಾಗಲೇ ಹಾಜರುಪಡಿಸಿರುವ ದಾಖಲೆಗಳು ಮತ್ತು ಪ್ರತಿವಾದಿಗಳು ಹಾಜರುಪಡಿಸಿದ ದಾಖಲೆಗಳಲ್ಲಿ ನೋಡಿರುವುದಿಲ್ಲ. ನಿಸಿ 1 ರಿಂದ 6 ದಾಖಲೆಗಳನ್ನು ಮೂಲ ದಾಖಲೆಗಳನ್ನು ನೋಡಿ ಹಾಜರುಪಡಿಸಿರುವುದಿಲ್ಲ. ಇವುಗಳ ಮೂಲ ಕಡತಗಳು ನಮ್ಮ ಕಛೇರಿಯಲ್ಲಿ ಇರುವುದಿಲ್ಲ. ಈ ದಾಖಲೆಗಳನ್ನು ದೃಢೀಕರಣ ಮಾಡಲಾಗಿರುತ್ತದೆ. ಪ್ರತಿವಾದಿಯ ಗಂಡನಿಗೆ ಹಕ್ಕು ಪತ್ರ ವಿತರಣೆಯಾಗಿರುವ ಕುರಿತು ನಾನು ವಿಚಾರಿಸಿರುವುದಿಲ್ಲ. ನಿಸಿ 1 ರಿಂದ 6 ದಾಖಲೆಗಳ ಕುರಿತು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಈ ದಾಖಲೆಗಳ ಕುರಿತು ಹಿಂದಿನ ಅಧಿಕಾರಿಗಳಿಗೆ ಮಾಹಿತಿ ಇರುತ್ತದೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನವನ್ನು ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸರಿ ಇದೆ.
ನನ್ನ ಸಮಕ್ಷಮ

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ.**